ಗ್ರಾಫಿಕ್ಸ್ ಕಥನ

# ಗ್ರಾಫಿಕ್ ಕಾದಂಬರಿಯ ರುಚಿಮಾದರಿ

ಇರಾನ್ ಮೂಲದ ಲೇಖಕಿ ಮಾರ್ಜಾನ ಸತ್ರಪಿ ವಿರಚಿತ 'ದ ಪರ್ಸಿಪೊಲಿಸ್' (ಪ್ರಕಟಣೆ: ಲಾ ಅಸೋಸಿಯೇಷನ್) ಕೃತಿಯ ಮೊದಲನೇ ಭಾಗ 2000ನೇ ಇಸವಿಯಲ್ಲಿ, ಎರಡನೇ ಭಾಗ 2004ರಲ್ಲಿ ಫ್ರೆಂಚ್ ಭಾಷೆಯಲ್ಲಿ 'ಗ್ರಾಫಿಕ್ ಕಾದಂಬರಿ' ಆಗಿ ಪ್ರಕಟಗೊಂಡು ಅಭೂತಪೂರ್ವ ಯಶಸ್ಸನ್ನು ಕಂಡಿತು. 1969ರ ನವೆಂಬರ್ 22ರಂದು ಇರಾನ್‌ನ ಟೆಹರಾನ್ ನಗರದಲ್ಲಿ ಮಧ್ಯಮವರ್ಗಕ್ಕೆ ಸೇರಿದ ಪ್ರಗತಿಪರ ವಿಚಾರಗಳುಳ್ಳ ಸಾಮಾಜಿಕ ಕಾರ್ಯಕರ್ತರಾಗಿದ್ದ ತಾಯಿ–ತಂದೆಯ ಮಗಳಾಗಿ ಜನಿಸಿದ ಮಾರ್ಜಾನ, ಫ್ರೆಂಚ್ ಭಾಷೆಯ ಶಾಲೆಯಲ್ಲಿ ವ್ಯಾಸಂಗ ಮಾಡಿದರು. ರಾಜಕೀಯವಾಗಿ ಸಕ್ರಿಯರಾಗಿದ್ದ ಅವರ ಪೋಷಕರು, ಇರಾನ್ ದೇಶದ ಕೊನೆಯ ಷಾ ಅವರ ರಾಜಪ್ರಭುತ್ವದ ವಿರುದ್ಧ ಉದಾರವಾದಿ ಹೋರಾಟಗಳನ್ನು ಬೆಂಬಲಿಸಿದರು. ಇರಾನಿನ ಅತಿಮುಖ್ಯ ಸ್ಥಿತ್ಯಂತರ ನಡೆಯುತ್ತಿದ್ದ ಸಮಯದಲ್ಲಿ 10 ವರ್ಷದ ಪುಟ್ಟ ಹುಡುಗಿ ಮಾರ್ಜಾನ ಕಣ್ಣೆದುರು 1979ರಲ್ಲಿ ಇರಾನಿನ ಕ್ರಾಂತಿಯು ನಡೆದು, ಮುಸ್ಲಿಂ ಮೂಲಭೂತವಾದಿಗಳ ಆಳ್ವಿಕೆಗೆ ಒಳಪಡುತ್ತದೆ. ಅನಂತರದ ದಿನಗಳಲ್ಲಿ ಕಂಡ ಚಿತ್ರಣಗಳನ್ನು, ಮಾರ್ಜಾನ ತಮ್ಮ ವಿಶಿಷ್ಟ ಯುವ ಮನಸ್ಸಿನ ಕಣ್ಣಿನಿಂದ ಇಲ್ಲಿ ಹಿಡಿದಿಟ್ಟಿದ್ದಾರೆ.



ಮಾರ್ಜಾನ ಸತ್ರಪಿ

ಸಾಕಷ್ಟು ಮೆಚ್ಚುಗೆಯನ್ನು ಗಳಿಸಿದ ಈ ಪುಸ್ತಕವು ಒಂದು ವಿನೂತನ ಪ್ರಯೋಗ. ಹಲವು ಮುದ್ರಣ ಕಂಡು, ಅನಿಮೇಷನ್ ಸಿನಿಮಾ ಕೂಡ ಆಗಿ ಹಲವು ಪ್ರಶಸ್ತಿಗಳಿಗೆ ಪಾತ್ರವಾಗಿದೆ. ರಾಜಾಡಳಿತ ಬದಲಾಗಿ ಮೂಲಭೂತವಾದಿಗಳ ಕೈಗೆ ಅಧಿಕಾರ ಬಂದ ನಂತರ, ಆ ಆಳ್ವಿಕೆಯಲ್ಲಿ ಕಂಡ ವೈರುಧ್ಯಗಳು, 'ಮಗಳ ಭವಿಷ್ಯ ಇರಾನಿನಲ್ಲಿ ಇಲ್ಲ' ಎನ್ನುವ ವಾಸ್ತವವನ್ನು ತಿಳಿದು ಅಸಹಾಯಕರಾದ ಅವಳ ಅಪ್ಪ–ಅಮ್ಮ 14ರ ಬಾಲೆಯೊಬ್ಬಳನ್ನೇ ದೂರದ ಆಸ್ಟ್ರಿಯಾಕ್ಕೆ, ಸಂಪರ್ಕ ದುಸ್ತರವಾಗಿದ್ದ ಕಾಲದಲ್ಲೂ ಕಳಿಸುತ್ತಾರೆ. 'ಬದುಕಿದರೆ ಬೇಡಿ ತಿಂದೇನು' ಎಂಬಂತೆ ಹತ್ತು ಹಲವಾರು ಸಿಹಿಕಹಿ ಅನುಭವಗಳೊಂದಿಗೆ, ಸಾವಿನ ಬಾಗಿಲನ್ನೂ ತಟ್ಟಿ ಬರುವ ಹುಡುಗಿ, ಮತ್ತೆ ಇರಾನಿಗೆ ಮರಳಿ ಬದಲಾದ ದೇಶವನ್ನು ಕಂಡು ಮರುಗುತ್ತಾಳೆ. ಕೆಲವು ವರ್ಷ ತನ್ನದೇ ನೆಲ ಇರಾನಿನಲ್ಲಿ ಬದುಕುತ್ತಿರುವಾಗ ಆಳ್ವಿಕೆ ಮಾಡುತ್ತಿರುವ ಮೂಲಭೂತವಾದಿಗಳ ದಬ್ಬಾಳಿಕೆಯ ತಂತ್ರಗಳ ನಡುವಿನಲ್ಲೇ ಶಿಕ್ಷಣ ಮುಂದುವರೆಸಿ, ಎಲ್ಲದರ ನಡುವೆಯೂ ಆಶಾಭಾವದ ಸೆಳಕನ್ನು ಕಾಣಲು ಪ್ರಯತ್ನಪಡುತ್ತಾಳೆ. ವೈಯಕ್ತಿಕ ಅಡೆತಡೆಗಳ ನಡುವೆ ಫ್ರಾನ್ಸ್‌ಗೆ ಹೋಗಿ ಮನಃಪೂರ್ತಿಯಾಗಿ ಓದು ಮುಂದುವರೆಸಲೆಂದು ಮತ್ತೆ ಇರಾನ್ ಬಿಡುತ್ತಾಳೆ. ಮತ್ತೆ ತೊರೆಯುತ್ತಿರುವ ತನ್ನ ನೆಲದ ಬಗ್ಗೆ ಅವಳಿಗೆ ಭಾವುಕತೆ ಇದೆಯಾದರೂ ಅದು ಅವಳ ದೌರ್ಬಲ್ಯ ಅಲ್ಲ, ಬದಲಿಗೆ ಎದೆಯಲ್ಲಿ ತುಂಬಿಕೊಂಡ ಜೀವವಾಯುವಿನ ಹಾಗೆ ಶಕ್ತಿಯಾಗಿ ಮಾರ್ಪಾಡಾಗಿದೆ. ಮಾರ್ಜಾನ ಅವರ ಈ ಕೃತಿಯನ್ನು ಇಂಗ್ಲಿಷ್ ನಿಂದ ಕನ್ನಡಕ್ಕೆ ಲೇಖಕಿ ಪತ್ರಕರ್ತೆ ಪ್ರೀತಿ ನಾಗರಾಜ ಅನುವಾದಿಸಿದ್ದಾರೆ. ವಸುಧೇಂದ್ರರ 'ಛಂದ ಪುಸ್ತಕ'ದಿಂದ ಹೊರಬರುತ್ತಿರುವ ಈ ಪ್ರಕಟಣೆ, ಕನ್ನಡದ ಮಟ್ಟಿಗೆ ಗ್ರಾಫಿಕ್ ಕಾದಂಬರಿಯಾಗಿ ಒಂದು ಹೊಚ್ಚ ಹೊಸ ಪ್ರಯತ್ನ. ಈ ಕೃತಿಯ ರುಚಿಮಾದರಿ ಒದಗಿಸುವ ಒಂದು ಅಧ್ಯಾಯ ಇಲ್ಲಿದೆ. ●